


**ಶ್ರೀಮನ್ಮಧ್ವಮತೇ ಹರಿಃ ಪರತರಃ**
**ಸತ್ಯಂ ಜಗತ್ ತತ್ವತೋ ।**
**ಭೇದೋ ಜೀವಗಣಾ ಹರೇರನುಚರಾಃ**
**ನೀಚೋಚ್ಚಭಾವಂ ಗತಾಃ ॥**
**ಮುಕ್ತಿರ್ನೈಜಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ**
**ಹ್ಯಕ್ಷಾದಿತ್ರಿತಯಂ ಪ್ರಮಾಣಮಖಿಲಾಮ್ನಾಯೈಕವೇದ್ಯೋ ಹರಿಃ ॥**

**ಶ್ರೀಮನ್ಮಧ್ವಸಿದ್ಧಾಂತದಲ್ಲಿ** :-

(೧) ಶ್ರೀಹರಿಯೇ ಸರ್ವೋತ್ತಮನು
(೨) ಪ್ರಮಾಣ ಪ್ರಮಿತವಾದ ಈ ಜಗತ್ತು ಪಾರಮಾರ್ಥತಃ ಸತ್ಯವು
(೩) ಜೀವೇಶ್ವರ ಭೇದ, ಜಡೇಶ್ವರ ಭೇದ, ಜೀವ-ಜಡಭೇದ, ಜೀವ-ಜೀವಭೇದ, ಜಡ-ಜಡ ಭೇದಗಳೆಂಬ ಭೇದಪಂಚಕವು ಪಾರಮಾರ್ಥಿಕವು
(೪) ಸಾತ್ವಿಕ, ರಾಜಸ, ತಾಮಸರೆಂಬ ತ್ರಿವಿಧ ಜೀವರುಗಳು ಯಾವಾಗ್ಯೂ ಶ್ರೀಹರಿಯ ಅಧೀನರು
(೫) ಸ್ವಭಾವತಃ ತಾರತಮ್ಯದಲ್ಲಿ ಇರುವವರು
(೬) ಸ್ವರೂಪಭೂತಾನಂದಾನುಭವವೇ ಸಾತ್ವಿಕರಿಗೆ ಮುಕ್ತಿಯು
(೭) ಪರಮ ನಿರ್ಮಲ ವಿಷ್ಣು ಭಕ್ತಿಯೇ ಆ ಮುಕ್ತಿಯ ಸಾಧನವು
(೮) ಪ್ರತ್ಯಕ್ಷ, ಅನುಮಾನ, ಆಗಮಗಳೆಂದು ಪ್ರಮಾಣಗಳು ಮೂರೇ
(೯) ಶ್ರೀಹರಿಯೇ ಅಖಿಲ ಸದಾಗಮಗಳಿಂದ ಪರಮ ತಾತ್ಪರ್ಯಪೂರ್ವಕ ಮುಖ್ಯ ಪ್ರತಿಪಾದ್ಯನು, ಎಂದು ಈ ಪ್ರಮೇಯ ನವರತ್ನಗಳು ಪ್ರಕಾಶಿಸುತ್ತವೆ.

ಬುದ್ಧಿರ್ಬಲಂ ಯಶೋಧೈರ್ಯಂ ನಿರ್ಭಯತ್ವಮರೋಗತಾಂ ।
ಅಜಾಡ್ಯಂ ವಾಕ್ಪಟುತ್ವಂ ಚ ಹನೂಮತ್ ಸ್ಮರಣಾದ್ಭವೇತ್ ॥

ಜ್ಞಾನ, ಬಲ, ಯಶಸ್, ಧೈರ್ಯ, ಭಯರಾಹಿತ್ಯ, ಆರೋಗ್ಯ, ಜಾಡ್ಯವಿಲ್ಲದಿರುವಿಕೆ, ಶ್ರೇಷ್ಠಮಾತುಗಾರಿಕೆ, ಇವೆಲ್ಲವೂ ಹನೂಮಂತನ ಸ್ಮರಣೆಯಿಂದ ಲಭಿಸುತ್ತದೆ.

ಪೃಥ್ವೀ ಮಂಡಲ ಮಧ್ಯಸ್ಥಾಃ ಪೂರ್ಣಬೋಧ ಮತಾನುಗಾಃ ।
ವೈಷ್ಣವಾಃ ವಿಷ್ಣು ಹೃದಯಾಸ್ತಾನ್ನಮಸ್ಯೇ ಗುರೂನ್ಮಮ ॥

ಭೂಮಂಡಲದಲ್ಲಿ ವಾಸಿಸುತ್ತಿರುವ ಮಧ್ವಾಚಾರ್ಯರ ಮತವನ್ನು ಅನುಸರಿಸುತ್ತಿರುವ ವಿಷ್ಣುವಿನ ಧ್ಯಾನದಲ್ಲಿರತರಾದ ಆ ವೈಷ್ಣವ ಗುರುಗಳೆಲ್ಲರನ್ನು ನಮಿಸುವೆ.

**ಮ ಧ್ವ ಮತವೇ ಮತವು ಸಕಲ ಶೃತಿ ಸಮ್ಮತವು**

ಶ್ರೀ ಮ ದಾ ನ ಂ ದ ತೀ ರ್ಥ ಗು ರು ಭ್ಯೋ ನ ಮಃ

ಪಂಚಭೇದಾತ್ಮಕ ಪ್ರಪಂಚಕೆ
ಪಂಚರೂಪಾತ್ಮಕನೆ ದೈವಕ
ಪಂಚಮುಖ ಶಕ್ರಾದಿಗಳು ಕಿಂಕರರು ಶ್ರೀಹರಿಗೆ ।

ಪಂಚವಿಂಶತಿ ತತ್ವ ತರತಮ
ಪಂಚಿಕೆಗಳನು ಪೇಳ್ದ ಭಾವಿವಿ–
ರಿಂಚಿಯೆನಿಪಾನಂದತೀರ್ಥರ ನೆನೆವೆನನುದಿನವು ॥

'ಪಂಚಭೇದ ಸ್ವರೂಪವಾದ ಈ ಪ್ರಪಂಚಕ್ಕೆ ಪಂಚರೂಪಿಯಾದ ಶ್ರೀಹರಿಯೆ ಪರದೇವತೆ. ರುದ್ರ, ಇಂದ್ರ ಮುಂತಾದವರೆಲ್ಲ ಅವನಿಗೆ ಕಿಂಕರರು. ಇಪ್ಪತ್ತೈದು ತತ್ವಗಳಿವೆ. ತಾರತಮ್ಯವಿದೆ.' ಈ ಎಲ್ಲ ವಿವರಗಳನ್ನು ಉಪದೇಶಿಸಿದ ಭಾವಿ ಬ್ರಹ್ಮರೆನಿಸಿದ ಆನಂದತೀರ್ಥರನ್ನು ಅನುದಿನವೂ ನೆನೆಯುವೆನು.

( ಹ ರಿ ಕ ಥಾ ಮೃ ತ ಸಾ ರ – ಮ ಂ ಗ ಳಾ ಚ ರ ಣ ಸ ಂ ಧಿ )

ನಮಸ್ತೇ ಪ್ರಾಣೇಶ ಪ್ರಣತ ವಿಭವಾಯ ಅವನಿಮಗಾ
ನಮಃ ಸ್ವಾಮಿನ್ ರಾಮಪ್ರಿಯತಮ ಹನೂಮನ್ ಗುರುಗುಣ ।
ನಮಸ್ತುಭ್ಯಂ ಭೀಮ ಪ್ರಬಲತಮ ಕೃಷ್ಣೇಷ್ಟ ಭಗವನ್
ನಮಃ ಶ್ರೀಮನ್ಮಧ್ವ ಪ್ರದಿಶ ಸುದೃಶಂ ನೋ ಜಯ ಜಯ ॥

ಎಲ್ಲ ಇಂದ್ರಿಯಾಭಿಮಾನಿ ದೇವತೆಗಳನ್ನು ನಿಯಮಿಸುವ ಮುಖ್ಯಪ್ರಾಣದೇವರೇ, ಸಜ್ಜನರ ಮೇಲಿನ ಕೃಪೆಯಿಂದ ಧರಿಣೆಗೆ ಇಳಿದು ಬಂದಿರಿ. ನನ್ನ ಪ್ರಣಾಮಗಳು. ಶ್ರೀರಾಮಚಂದ್ರನಿಗೆ ಅತ್ಯಂತ ಪ್ರೀತಿಪಾತ್ರರಾದ ಶ್ರೇಷ್ಠವಾದ ಗುಣಗಳನ್ನು ಹೊಂದಿರುವ ಹನೂಮಂತ ದೇವರೇ, ನನ್ನ ನಮಸ್ಕಾರಗಳು.

ಬಲಿಷ್ಠರೂ ಶ್ರೀಕೃಷ್ಣನಿಗೆ ಮುಖ್ಯಪ್ರೀತಿಪಾತ್ರರೂ ಆದ ಭೀಮಸೇನದೇವರೇ ನಿಮಗೆ ನಮಸ್ಕಾರವು. ಭಗವಾನ್ ಶ್ರೀಮನ್ಮಧ್ವರೇ ನಿಮಗೆ ನಮಸ್ಕಾರವು. ನಮಗೆ ಉತ್ತಮ ಜ್ಞಾನವನ್ನು ಕರುಣಿಸಿರಿ. ತಮಗೆ ಜಯವಾಗಲಿ, ಜಯವಾಗಲಿ.

ಅಭ್ರಮಂ ಭಂಗ ರಹಿತಂ ಅಜಡಂ ವಿಮಲಂ ಸದಾ ।
ಆನಂದತೀರ್ಥ ಮತುಲಂ ಭಜೇ ತಾಪತ್ರಯಾಪಹಂ ॥

ಶ್ರೀಮದಾಚಾರ್ಯರ ಶಾಸ್ತ್ರವು ಖಚಿತವಾದ ಸ್ಪಷ್ಟ ಅಭಿಪ್ರಾಯ– ಯುಕ್ತವು. ಅನುಮಾನಕ್ಕೆ ಆಸ್ಪದವಿಲ್ಲದ್ದು. ಅಸ್ಖಲಿತವಾದದ್ದು. ಜಾಡ್ಯಾದಿ ದೋಷ– ರಹಿತವಾದದು. ಅಂಥಾ ಶಾಸ್ತ್ರನಿರ್ಮಾತೃಗಳೂ, ಆಧ್ಯಾತ್ಮಿಕ, ಆದಿದೈವಿಕ, ಆದಿಭೌತಿಕ ತಾಪಗಳನ್ನು ನಿವಾರಿಸುವ ಸಾಮರ್ಥ್ಯವುಳ್ಳವರೂ ಆದ ಆನಂದತೀರ್ಥ ಮುನಿಗಳನ್ನು ಭಕ್ತಿಪೂರ್ವಕವಾಗಿ ವಂದಿಸುತ್ತೇವೆ.

ಬ್ರಹ್ಮಾಂತಾ ಗುರವಃ ಸಾಕ್ಷಾದಿಷ್ಟಂ ದೈವಂ ಶ್ರಿಯಃಪತಿಃ ।
ಆಚಾರ್ಯಾಃ ಶ್ರೀಮದಾಚಾರ್ಯಾಃ ಸಂತು ಮೇ ಜನ್ಮಜನ್ಮನಿ ॥

ನನಗೆ ಜನ್ಮಜನ್ಮದಲ್ಲಿಯೂ ಬ್ರಹ್ಮದೇವರ ವರೆಗಿನ ಸ್ವೋತ್ತಮ ಜೀವರೆಲ್ಲರೂ ಗುರುಗಳಾಗಿ ಲಭಿಸಲಿ. ಇಷ್ಟದೈವ ಸಾಕ್ಷಾತ್ ಲಕ್ಷ್ಮೀರಮಣನೆ ಆಗಿರಲಿ. ಆಚಾರ್ಯರು ಶ್ರೀ ಮದಾಚಾರ್ಯರೇ ಆಗಿರಲಿ.

## ಶ್ರೀಮದಾಚಾರ್ಯರ ಬಗ್ಗ ವಿವಿಧ ಟೀಕಾಟಿಪ್ಪಣೀ ಗ್ರಂಥಗಳಲ್ಲಿ ಸ್ತುತಿ – ಪದ್ಮನಾಭತೀರ್ಥರ ಪ್ರಶಂಸೆ –

೧. ಶ್ರೀಮದಾನಂದತೀರ್ಥಾಖ್ಯಾನ್ ಗುರೂನ್ ವಿದ್ಯಾದಿವಾಕರಾನ್ ।
ವಂದೇ ಕುದೃಷ್ಟಿದುರ್ಬೋಧವ್ಯಾಸಸಿದ್ಧಾಂತದೀಪಿಕಾನ್ ॥

೨. ಲಕ್ಷ್ಮೀನಾರಾಯಣೌ ವಂದೇ ತಯೋರ್ಯ ಭಕ್ತಿಮತ್ತಮ: ।
ಶ್ರೀಮದಾನಂದತೀರ್ಥಾಖ್ಯೌ ಗುರುಸ್ತಂ ಚ ನಮಾಮ್ಯಹಮ್ ॥

೩. ಸಕಲಗುಣಸುಪೂರ್ಣಾನ್ ವ್ಯಾಸಶಿಷ್ಯಾನ್ ವರಿಷ್ಟಾನ್
ದಿನಕರಸಮಭಾಸಾನೂರ್ಧ್ವಪುಂಡ್ರಾನ್ ದಧಾನಾನ್ ।
ಹರಿಚರಣಸರೋಜಂ ಸರ್ವದಾ ಸೇವಮಾನಾನ್
ತವ ಕಮಲಸುಹಸ್ತೇ ಚಿಂತಯೇದ್ವಾಯುವಂಶ್ಯಾನ್ ॥

## ೨ ನರಹರಿತೀರ್ಥರ ಪ್ರಶಂಸೆ –

ವಾಚಾ ಯದ್ವತ್ ಸ್ವದೋಷ್ಣಾ ಸ ಪುನರಿಹ ಕಲೌ ಕೃಷ್ಣಗೀತಾಸುಭಾಷ್ಯಂ ।
ಚಕ್ರೇ ಭೂಚಕ್ರಗಸ್ತಂ ಶರಣಮಿಹಮಗಾಂ ಶ್ರೀಮದಾನಂದತೀರ್ಥಮ್ ॥
(ಗೀತಾಭಾಷ್ಯಟೀಕಾ)

ಯೋ ಭಾರತೀಮಪಹೃತಾಮಸುರೈ: ಸಹಾಸ್ಯ–
ಗೋಭಿ: ಶುಭಾಂ ಭಗವತೀಮಸುರಾನ್ ನಿಹತ್ಯ ।
ಉತ್ಪಾದ್ಯ ಚಾಥ ಕುಪಿತಾಮಥ ವೈಷ್ಣವೀಂ ತಾಂ
ಚಕ್ರೇ ಕರೋತು ಸ ದಶಪ್ರಮತಿರ್ಹಿ ಗಾಂ ನ: ॥ (ಯಮಕಭಾರತ ಟೀಕಾ)

## ನಾರಾಯಣಪಂಡಿತಾಚಾರ್ಯರಿಂದ ಪ್ರಶಂಸೆ –

ನಮೋ ವೇದಾಂತರಾದ್ಧಾಂತಸೂಕ್ತಿ ರತ್ನಾಕರಾತ್ಮನೇ ।
ಶ್ರೀಮದಾನಂದತೀರ್ಥಾಖ್ಯಭಗವದ್ದುಗ್ಧಸಿಂಧವೇ ॥ **(ನಯಚಂದ್ರಿಕಾ)**

ಮಹಾವ್ಯಾಕರಣಾಂಭೋಧಿಮಂಥಮಾನಸಮಂದಿರಮ್ ।
ಕವಯಂತಂ ರಾಮಕೀರ್ತ್ಯಾ ಹನೂಮಂತಮುಪಾಸ್ಮಹೇ ॥
ಮುಖ್ಯಪ್ರಾಣಾಯ ಭೀಮಾಯ ನಮೋ ಯಸ್ಯ ಭುಜಾಂತರಮ್ ।
ನಾನಾವೀರಸುವರ್ಣಾನಾಂ ನಿಕಷಾಸ್ಮಾಯಿತಮ್ ಬಭೌ ॥
ಸ್ವಾಂತಸ್ಥಾನಂತಶಯ್ಯಾಯ ಪೂರ್ಣಜ್ಞಾನರಸಾರ್ಣವೇ ।
ಉತ್ತುಂಗವಾಕ್ತರಂಗಾಯ ಮಧ್ವದುಗ್ಧಾಬ್ಧಯೇ ನಮ: **(ಸಂಗ್ರಹರಾಮಾಯಣ)**

## ಶ್ರೀ ಟೀಕಾಕೃತ್ಪಾದರಿಂದ ಪ್ರಶಂಸೆ –

ನ ಶಬ್ದಾಬ್ಧೌ ಗಾಢಾ: ನ ಚ ನಿಗಮಚರ್ಚಾಸು ಚತುರಾ ।
ನ ಚ ನ್ಯಾಯೇ ಪ್ರೌಢಾ: ನ ಚ ವಿದಿತವೇದ್ಯಾ ಅಪಿ ವಯಮ್ ॥
ಪರಂ ಶ್ರೀಮತ್ಪೂರ್ಣಪ್ರಮತಿಗುರುಕಾರುಣ್ಯಸರಣಿ ಪ್ರಪನ್ನಾ ।
ಮಾನ್ಯಾ: ಸ್ಮ: ಕಿಮಪಿ ಚ ವದಂತೋऽಪಿ ಮಹತಾಮ್ ॥ **(ನ್ಯಾಯಸುಧಾ)**

ಸ್ವಾಂತಧ್ವಾಂತನಿಕೃಂತನೇ ಜಿತಮಾಹವೈಕರ್ತನಾಂಶುವ್ರಜಂ ।
ನಿರ್ದೋಷಂ ಜಿತಚಂದ್ರಚಂದ್ರಿಕಮಲಂ ತಾಪತ್ರಯೋನ್ಮೂಲನೇ ।
ಗಾಂಭೀರ್ಯೇ ಜಿತಸುಂಧುರಾಜಮಮಿತಂ ಭಾಷ್ಯಂ ಯದಾಸ್ಯಾಂಬುಜಾ–
ದಾವಿರ್ಭೂರಮಂದಬೋಧಭಗವತ್ಪಾದಾನ್ ಪ್ರಪದ್ಯೇऽಥ ತಾನ್ ॥ **(ತತ್ತ್ವಪ್ರಕಾಶಿಕಾ)**

ನಮಾಮಿ ಶ್ರೀಮದಾನಂದತೀರ್ಥಾಚಾರ್ಯಂ ಪರಂ ಗುರುಮ್ ।
ಯಸ್ಯ ವಾಣೀ ಕೃಪಾಣೀಯಂ ನಿಕೃಂತತಿ ಭವಾಟವೀಮ್ ॥ **(ನ್ಯಾಯವಿವರಣಟೀಕಾ)**

ನಮಾಮಿ ವ್ಯಾಸದಾಸಸ್ಯ ಪೂರ್ಣಬುದ್ಧೇ: ಪದಾಂಬುಜೇ ।
ನತಾಮರಶಿರೋರತ್ನರಾಜವೀರಾಜಿತೇ ಸದಾ । **(ಪ್ರಮೇಯದೀಪಿಕಾ)**

ಧರ್ಮವಿಜ್ಞಾನ ವೈರಾಗ್ಯ ಪರಮೇಶ್ವರ್ಯಶಾಲಿನ: ।
ಆನಂದತೀರ್ಥಭಗವತ್ಪಾದಾನ್ ವಂದೇ ನಿರಂತರಮ್ ॥ **(ನ್ಯಾಯದೀಪಿಕಾ)**

ಲಸತು ಶ್ರೀಮದಾನಂದತೀರ್ಥೇಂದುರ್ನೋ ಹೃದಂಬರೇ ।
ಯದ್ವಚಸ್ವಂದ್ರಿಕಾ ಸ್ವಾಂತಸಂತಾಪಂ ವಿನಿಕೃಂತತಿ । **(ವಿಷ್ಣುತತ್ತ್ವವಿನಿರ್ಣಯಟೀಕಾ)**

## ಶ್ರೀವ್ಯಾಸರಾಜರಿಂದ ಪ್ರಶಂಸೆ –

ಶ್ರೀಮದಾನಂದತೀರ್ಥಾರ್ಯಪಾದಪಂಕಜರೇಣವ: ।
ಪವಿತ್ರಯಂತು ಮಾಂ ನಿತ್ಯಂ ಪಾಪಪಾಟನಪಂಡಿತಾ:॥ (ತಾತ್ಪರ್ಯಚಂದ್ರಿಕಾ)

ಅಭ್ರಮಂ ಭಂಗರಹಿತಮಜಡಮ್ ವಿಮಲಂ ಸದಾ ।
ಆನಂದತೀರ್ಥಮತುಲಂ ಭಜೇ ತಾಪತ್ರಯಾಪಹಮ್ ॥ **(ನ್ಯಾಯಾಮೃತ)**

ಶ್ರೀಶಪಾದಾಂಬುಜಾಸಕ್ತ: ಕರುಣಾಪೂರಶೀತಲ: ।
ಮಧ್ವಾಖ್ಯೋ ಮರುದಂಶೋ ಮೇ ಸಂತಾಪಾನ್ ಹಂತು ಸಂತತಮ್ ॥ **(ತರ್ಕತಾಂಡವ)**

ಸುಖತೀರ್ಥಪದಾಂಬುಜಂ ಭಜೇ
ಮಖಭುಗ್ಭಿರ್ಹೃದಯೇsರ್ಚಿತಂ ನಿಜೇ ।
ನಿಖನತ್ಯಲಮಾಪದ: ಸ್ಮೃತಂ
ಸುಖದೋರುಸ್ವರವನ್ಮಹೀಭೃತಮ್ ॥ **(ಜಯತೀರ್ಥವಿಜಯ)**

## ವಾದಿರಾಜರಿಂದ ಪ್ರಶಂಸೆ –

ಸತ್ಸಂಘಮಾನಾನಸ ಸರೋವರಮಧ್ಯವರ್ತೀ
ಕೃಷ್ಣಾಂಘ್ರಿಚಾರುಕಮಲಾರ್ಪಿತಚಿತ್ತವೃತ್ತಿ:
ಶಾಸ್ತ್ರಾತಿಮಂಜುಪದರಂಜಿತರಮ್ಯಸಂಸ–
ದಾಸ್ಮಾಕಹೃತ್ಸರಸಿಜೇ ಸ್ತು ಸ್ ಮಧ್ವಹಂಸ: **(ರುಗ್ಮಿಣೀಶವಿಜಯ)**

ಮಾಧ್ವಗ್ರಂಥಸ್ಯಾಭಿಸಂಧಿಮ್ ವಿದುರ್ದೇವಾ ನ ಮಾನವಾ: ।
ವಾಯುಸ್ತುತಿರತಿರ್ನಿತ್ಯಂ ವೇದಾಹಂ ತು ಕಥಂಚನ ॥
**(ಮ.ಭಾ.ತಾ. ನಿರ್ಣಯ ಭಾವಪ್ರಕಾಶಿಕಾ)**

ಆಜನ್ಮಭೂಮೇರಟತೋ ಖೀಷು ತೀರ್ಥೇಷು ತದ್ವರ್ಣವನಭಾರಮೂಢ್ವಾ ।
ಆಯಾಸಮಸ್ಮನ್ಮೃದುಮಾನಸಸ್ಯ ವಾಯುರ್ಮುಹು: ಕೃತಂತು ಮಧ್ವರೂಪೀ
**(ತೀರ್ಥಪ್ರಬಂಧ)**

ಶುದ್ಧಾಯಾನಾದಿಸಿದ್ಧಾಯ ಸ್ವಧ್ಯಾಯೋನ್ನದ್ಧಬುದ್ಧಯೇ ।
ಹೃದ್ಯಾಯ ನಿರವದ್ಯಾಯ ಮಧ್ವಾಯ ಚ ನಮೋ ನಮ: ॥ **(ಭೂಗೋಲವರ್ಣನ)**

ಹೀನಬುದ್ಧಿಯಿಂದ ಶ್ರೀ ಹಯವದನನ ಜರಿದು
ತಾನು ಬದುಕಲರಿಯದಿರಲು ತೋರಿಕೊಟ್ಟ ಮಧ್ವ ಮುನಿಯ
ಒಂದು ಬಾರಿ ಸ್ಮರಣೆ ಸಾಲದೆ
ಆನಂದತೀರ್ಥರ ಪೂರ್ಣಪ್ರಜ್ಞರ
ಸರ್ವಜ್ಞರಾಯರ ಮಧ್ವರಾಯರ ॥

## ವಾದೀಂದ್ರತೀರ್ಥರು – ಗುರುಗುಣಸ್ತವನದಲ್ಲಿ

ಶ್ರೀಮದ್ರಾಮಾಭಿರಾಮಾಮಿತಮಹಿಮಪದಪ್ರೌಢಪಾಥೋರುಹಾಲಿ:
ಕೃಷ್ಣಾನಿಷ್ಟಾಮಿತಕ್ಷ್ಮಾಪರಿವೃಢಪಟಲೀಪಾಟನೈಕಪ್ರವೀಣ: ।
ವೇದವ್ಯಾಸೋಪದೇಶಾಧಿಕಸಮಧಿಗತಾನಂತ ವೇದಾಂತಭಾವೋ
ಭೂಯಾತ್ ಕೀಶಾವನೀಶವ್ರತಿತನುರನಿಲ: ಶ್ರೇಯಸೇ ಭೂಯಸೇ ನ: ॥

ಉದ್ವೇಲವ್ಯಾಸತಂತ್ರವ್ಯವಸಿತನಿಖಿಲಾಭಿಜ್ಞಹೃದ್ಯಾನವದ್ಯಾ–
ನಂತತ್ರಯ್ಯಂತಭಾವ ಪ್ರಕಟನಘಟನಾಸರ್ವತಂತ್ರಸ್ವತಂತ್ರೇ ।
ಸಂವರ್ಣ್ಯೇ ಮಂತ್ರವರ್ಣೈರನಿತರವಿಷಯಸ್ಪರ್ಶಿಭಿ: ಪಾವಮಾನೇ
ರೂಪೇ ಲೋಕೈಕದೀಪೇ ಪ್ರಸರತು ಹೃದಯಂ ಮಾಮಕಂ ಮಧ್ವನಾಮ್ನಿ ॥

## ಮಧ್ವದ್ವಾದಶನಾಮ ಸ್ತೋತ್ರಮ್ –

ಪೂರ್ಣಪ್ರಜ್ಞೋ ಜ್ಞಾನದಾತಾ ಮಧ್ವೋ ಧ್ವಸ್ತದುರಾಗಮ: ।
ತತ್ತ್ವಜ್ಞೋ ವೈಷ್ಣವಾಚಾರ್ಯೋ ವ್ಯಾಸಶಿಷ್ಯೋ ಯತೀಶ್ವರ: ॥
ಆನಂದತೀರ್ಥ: ಶಂ ನಾಮಾ ಜಿತವಾದೀ ಜಿತೇಂದ್ರಿಯ: ।
ಶ್ರೀಮದಾನಂದಸನ್ನಾಮ್ನಾಮೇವಂ ದ್ವಾದಶಕಂ ಪಠೇತ್ ।
ಲಭತೇ ವೈಷ್ಣವೀಂ ಭಕ್ತಿಂ ಗುರುಭಕ್ತಿಸಮನ್ವಿತಾಮ್ ॥

## (ಶ್ರೀ ಸುಮತೀಂದ್ರ ತೀರ್ಥರು–ದೇವಪೂಜಾಪದ್ಧತಿ)

ಯೋವಿಪ್ರಲಂಭ ವಿಪರೀತಮತಿಪ್ರಭೂತಾನ್
ವಾದಾನ್ ನಿರಸ್ಯ ಕೃತವಾನ್ ಭುವಿ ತತ್ವವಾದಮ್
ಸರ್ವೇಶ್ವರೋ ಹರಿರಿತಿಪ್ರತಿಪಾದಯಂತಂ
ಆನಂದತೀರ್ಥಮುನಿವರ್ಯಮಹಂ ನಮಾಮಿ॥

ಆರು ಮೂರೆರಡೊಂದು ಸಾವಿರ
ಮೂರೆರಡು ಶತ ಶ್ವಾಸಜಪಗಳ
ಮೂರುವಿಧ ಜೀವರೊಳಗಬ್ಜಜ ಕಲ್ಪಪರಿಯಂತ
ತಾ ರಚಿಸಿ ಸಾತ್ವರಿಗೆ ಸುಖ ಸಂ–
ಸಾರ ಮಿಶ್ರರಿಗಧಮಜನರಿಗ–
ಪಾರ ದುಃಖಗಳೀವ ಗುರುಪವಮಾನ ಸಲಹೆಮ್ಮ

'ಆರು ಮೂರು (೬ X ೩ = ೧೮) ಮತ್ತು ಎರಡೊಂದು ಸಾವಿರ (೨ + ೧ = ೩) ಒಟ್ಟು ೨೧ ಸಾವಿರ ಮತ್ತು ಮೂರೆರಡು (೩ X ೨ = ೬) ಶತ ಅಂದರೆ ಆರು ನೂರು, ೨೧,೬೦೦ ಶ್ವಾಸಜಪಗಳನ್ನು ಸಾತ್ವಿಕ, ರಾಜಸ, ತಾಮಸ, ಎಂಬ ತ್ರಿವಿಧ ಜೀವರಲ್ಲಿ ಬ್ರಹ್ಮಕಲ್ಪ ಪರ್ಯಂತ ಪ್ರತಿದಿನ ತಾನು ಮಾಡಿ ಸಾತ್ವಿಕರಿಗೆ ನಿತ್ಯವಾದ ಮೋಕ್ಷಸುಖವನ್ನೂ, ರಾಜಸರಾದ ಮಿಶ್ರ ಜೀವರಿಗೆ ನಿತ್ಯ ಸಂಸಾರವನ್ನೂ, ತಾಮಸರಾದ ಅಧಮ ಜೀವರಿಗೆ ನಿತ್ಯವಾದ ಅಪಾರ ದುಃಖವನ್ನೂ ನೀಡುವ ಗುರು ಪವಮಾನನೆ, ನಮ್ಮನ್ನು ಸಲಹು.'

( ಶ್ರೀ ಹ ರಿ ಕ ಥಾ ಮೃ ತ ಸಾ ರ – ಮ ಂ ಗ ಳಾ ಚ ರ ಣ ಸ ಂ ಧಿ )